(ಗೊಂದಲ)

(ಅನುಬಂಧ–4)

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ: ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಮತ್ತು ಸಾಮಾಜಿಕವಾಗಿ ಆರ್ಥಿಕವಾಗಿ ದುರ್ಬಲರಾಗಿರುವ ಸಮುದಾಯದವರು ಆರಾಧಿಸುತ್ತಾ ಬಂದಿರುವ ದೇವರುಗಳ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಹೆಚ್ಚು ಹಣ ಮಂಜೂರು ಮಾಡುವ ಬಗ್ಗೆ.

– – –

ಶ್ರೀ ವೈ.ಎಸ್.ವಿ. ದತ್ತಾ (ಕಡೂರು):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಮತ್ತು ಸಾಮಾಜಿಕವಾಗಿ ಆರ್ಥಿಕವಾಗಿ ದುರ್ಬಲವಾಗಿರುವ ಸಮುದಾಯದವರು ತಾವು ಆರಾಧಿಸುತ್ತಾ ಬಂದಿರುವ ಗ್ರಾಮೀಣ ದೇವರುಗಳ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಹಣ ಬಿಡುಗಡೆ ಮಾಡುವಂತೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಳೆದ ವರ್ಷ ಮನವಿ ಸಲ್ಲಿಸಿದ್ದರ ಮೇರೆಗೆ ಮಾನ್ಯ ಮುಖ್ಯಮಂತ್ರಿಗಳು ಇಂತಹ ದೇವಸ್ಥಾನಗಳಿಗೆ ಹಣ ಮಂಜೂರು ಮಾಡಿ ಬಿಡುಗಡೆ ಮಾಡುವಂತೆ ಆದೇಶಿಸಿದ್ದರು. ಸುಮಾರು 50 ಕೋಟಿ ರೂ. ಗಳನ್ನು ವಿವಿಧ ದೇವಸ್ಥಾನಗಳಿಗೆ ಹಂಚಿಕೆ ಮಾಡುವಂತೆ ಸೂಚಿಸಲಾಗಿತ್ತು. ಮುಜರಾಯಿ ಇಲಾಖೆಯು 2014ರ ನವೆಂಬರ್–ಡಿಸೆಂಬರ್‌ನಲ್ಲಿ ಈ ಬಗ್ಗೆ ಪ್ರಕ್ರಿಯೆ ನಡೆಸಿ ಅಂತಿಮ ಘಟ್ಟ ಮುಟ್ಟಿತ್ತು. ಆದಾಗ್ಯೂ ಇದುವರೆವಿಗೆ ಬಿಡಿಗಾಸು ಹಣವು ಯಾವುದೇ ದೇವಸ್ಥಾನಕ್ಕೆ ಬಿಡುಗಡೆಯಾಗಿಲ್ಲ; ಬಂದಿಲ್ಲ. ಈ ಬಗ್ಗೆ ಸರ್ಕಾರದ ಗಮನ ಸೆಳೆದು ತಕ್ಷಣವೇ ಹಣ ಬಿಡುಗಡೆ ಮಾಡುವಂತೆ ಕೋರುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯದ ಮುಜರಾಯಿ/ಮುಜರಾಯೇತರ ದೇವಸ್ಥಾನಗಳ ಜೀರ್ಣೋದ್ಧಾರ ಹಾಗೂ ಅಭಿವೃದ್ಧಿಗಾಗಿ 2014–15 ನೇ ಸಾಲಿನ ಆಯವ್ಯಯದಲ್ಲಿ ಇಲಾಖಾ ಲೆಕ್ಕ ಶೀರ್ಷಿಕೆ **"2250–00–103–5–12–ದೇವಸ್ಥಾನಗಳು ಮತ್ತು ಇತರೆ ಧಾರ್ಮಿಕ ಸಂಸ್ಥೆಗಳು–101 ಸಹಾಯಾನುದಾನ (ಯೋಜನೇತರ)"** ಅಡಿಯಲ್ಲಿ **₹ 1910–00 ಲಕ್ಷಗಳು** ಮತ್ತು **"2250–00–103–5–12–ದೇವಸ್ಥಾನಗಳು ಮತ್ತು ಇತರೆ ಧಾರ್ಮಿಕ ಸಂಸ್ಥೆಗಳು–200–ನಿರ್ಮಾಣ (ಯೋಜನೇತರ)"** ಅಡಿಯಲ್ಲಿ **₹ 1910–00 ಲಕ್ಷಗಳು** ಹೀಗೆ ಒಟ್ಟು **₹ 3820–00 ಲಕ್ಷಗಳನ್ನು** ಒದಗಿಸಲಾಗಿತ್ತು. ಸದರಿ ಅನುದಾನವನ್ನು ರಾಜ್ಯದ ಎಲ್ಲಾ ಜಿಲ್ಲೆಯ ಧಾರ್ಮಿಕ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಅದಲ್ಲದೇ, ಅನುದಾನ ಕೋರಿ ಹಲವಾರು ಮನವಿಗಳು ಸ್ವೀಕೃತವಾಗಿದ್ದವು. ಸದರಿ ಮನವಿಗಳಲ್ಲಿನ ಬೇಡಿಕೆ ಮೊತ್ತವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಲು ಅನುದಾನದ ಕೊರತೆಯಾಗಿತ್ತು.

ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಲು 2014–15 ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದಲ್ಲಿ ಅನುದಾನದ ಕೊರತೆ ಆದ ಹಿನ್ನೆಲೆಯಲ್ಲಿ ₹ 50–00 ಕೋಟಿಗಳನ್ನು ಹೆಚ್ಚುವರಿಯಾಗಿ ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿತ್ತು. ಆರ್ಥಿಕ ಇಲಾಖೆಯು ಹೆಚ್ಚುವರಿ ಅನುದಾನವನ್ನು ಒದಗಿಸಿರಲಿಲ್ಲ.

ರಾಜ್ಯದ ಮುಜರಾಯಿ/ಮುಜರಾಯೇತರ ದೇವಾಲಯಗಳ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡುವಂತೆ ಕೋರಿ ವಿವಿಧ ಮೂಲಗಳಿಂದ ಹಲವಾರು ಮನವಿಗಳು ಸ್ವೀಕೃತವಾಗುತ್ತಿವೆ. ಸದರಿ ಮನವಿಗಳ ಒಟ್ಟು ಬೇಡಿಕೆ ಮೊತ್ತವನ್ನು ಆಯಾಯ ಆರ್ಥಿಕ ವರ್ಷದ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಗನುಗುಣವಾಗಿ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಮತ್ತು ಸಾಮಾಜಿಕವಾಗಿ ಆರ್ಥಿಕವಾಗಿ ದುರ್ಬಲವಾಗಿರುವ ಸಮುದಾಯದವರ ದೇವಸ್ಥಾನಗಳ ಅಭಿವೃದ್ಧಿಗಾಗಿಯೇ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ ಹಾಗೂ ಆರಾಧನಾ ಯೋಜನೆಯಡಿ 2014–15 ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ₹ 26–00 ಕೋಟಿಗಳ ಅನುದಾನವನ್ನು ಕಲ್ಪಿಸಲಾಗಿತ್ತು. ಸದರಿ ಅನುದಾನವನ್ನು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ₹ 11–60 ಲಕ್ಷಗಳಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿಯೂ ಸಹ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ₹ 11–60 ಲಕ್ಷಗಳನ್ನು ನಿಗದಿಪಡಿಸಿ, ಪ್ರಥಮ ಕಂತಿನ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ವೈ.ಎಸ್.ವಿ. ದತ್ತಾ (ಕಡೂರು):– ಮಾನ್ಯ ಅಧ್ಯಕ್ಷರೆ, ನಾನು ಮುಜರಾಯಿ ಮಂತ್ರಿಗಳಿಗೆ ಕೇಳಿಕೊಳ್ಳುವುದೇನೆಂದರೆ, ದೇವಸ್ಥಾನಗಳಿಗೆ ಹಣ ಒದಗಿಸುವುದರ ಬಗ್ಗೆ ಈಗ ಸರ್ಕಾರ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ನಾನು ಕೇಳುತ್ತಿರುವುದು ದೇವರುಗಳಲ್ಲಿಯೂ ಕೂಡ ಅಹಿಂದ ದೇವರುಗಳ ಪರ ನಾನು ಕೇಳಿರುವುದು. ಆದುದರಿಂದ ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ದಯವಿಟ್ಟು ನೀವು ಬೇರೆ ದೊಡ್ಡ ದೇವರುಗಳಿಗೆ ಕೊಡಬೇಡಿ, ದೊಡ್ಡ ವರ್ಗದ ದೇವರುಗಳಿಗೆ ಕೊಡಬೇಡಿ.. . . . .

ಅಧ್ಯಕ್ಷರು:– ರೀ ದತ್ತಾ, ಭಾಷಣ ಬೇಡ, ಏನು ಬೇಕೋ ಅದನ್ನು ಕೇಳಿ, ಅದನ್ನು ಬಿಟ್ಟು ಕೆಲಸಕ್ಕೆ ಬಾರದ್ದನ್ನೆಲ್ಲ ಹೇಳಬೇಡಿ.

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಅಧ್ಯಕ್ಷರೆ, ನಾನು ಅದನ್ನೇ ಹೇಳುವುದಕ್ಕೆ ಹೊರಟಿದ್ದೇನೆ. ಸಾಮಾಜಿಕವಾಗಿ ಹಿಂದುಳಿದಿರುವಂಥ ದಲಿತರು, ಶೋಷಿತರು, ಸಂತ್ರಸ್ಥರು ಪೂಜೆ ಮಾಡುವಂಥ ಮಂಕಾಳಮ್ಮ, ಕಾಮ್ಮ, ...

ಅಧ್ಯಕ್ಷರು:– ರೀ, ಸುಮ್ಮನೆ ಕೆಲಸಕ್ಕೆ ಬಾರದ್ದನ್ನೆಲ್ಲ ಮಾತನಾಡಬೇಡ್ರಿ. ಸೀನಿಯರ್ ಮೆಂಬರ್ ಆಗಿ ಈ ರೀತಿಯೆಲ್ಲಾ ಮಾತನಾಡಬೇಡಿ.

ಶ್ರೀ ವೈ.ಎಸ್.ವಿ. ದತ್ತಾ:– ಒಂದು ವರ್ಷದಿಂದ ದುಡ್ಡು ಬಿಡುಗಡೆಯಾಗಿಲ್ಲ. ಮೊದಲು ದುಡ್ಡು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಅವರು 2014–15 ರಲ್ಲಿ 50 ಕೋಟಿ ರೂ. ಗಳನ್ನು ಹೆಚ್ಚುವರಿಯಾಗಿ ಕೇಳಿದ್ದೆವು, ಅದು ಬಿಡುಗಡೆಯಾಗಿಲ್ಲ ಎಂದು ಹೇಳುತ್ತಿದ್ದಾರೆ. ಆಯವ್ಯಯದಲ್ಲಿ ಮಂಡನೆ ಮಾಡಿರುವ ಪ್ರಕಾರ ಎಷ್ಟು ಹಣ ನಿಗದಿಯಾಗಿತ್ತೋ, ಅಷ್ಟು ಹಣ ಬಿಡುಗಡೆಯಾಗಿದೆ. ಈ ವರ್ಷಕ್ಕೂ ಕೂಡ ಈಗಾಗಲೇ ಮೊದಲನೇ ಕಂತು ಬಂದಿದೆ, ಎರಡನೇ ಕಂತು, ಮೂರನೇ ಕಂತು, ನಾಲ್ಕನೇ ಕಂತು ಬರಬೇಕಾಗುತ್ತದೆ. ಹೌದು, ನಿಜ ನಾನು ಒಪ್ಪುತ್ತೇನೆ.

ಶ್ರೀ ಸಿ.ಟಿ. ರವಿ:– ರೀ ಸ್ವಾಮಿ, ನಾವು ಹೋದಾಗಲೆಲ್ಲಾ ಅರ್ಜಿಗಳನ್ನು ಕೊಡುತ್ತಾರೆ. ಹಣ ಜಾಸ್ತಿ ತೆಗೆದುಕೊಂಡು ಬಿಡುಗಡೆ ಮಾಡಿ. ನೀವು ಹಿರಿಯ ಸಚಿವರಿದ್ದೀರಿ, ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ನೀವು ಹೆಚ್ಚಿಗೆ ಹಣವನ್ನು ತೆಗೆದುಕೊಂಡು ಕೊಡಿ.

ಶ್ರೀ ವಿ. ಸುನಿಲ್‌ಕುಮಾರ್:– ಈ ಹಿಂದೆ ದೇವಸ್ಥಾನಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದರು ಎಂಬುದು ನಿಮಗೆ ಗೊತ್ತಿದೆ. ಹಿಂದೆ 200–300 ಕೋಟಿ ರೂ. ಗಳ ಹಣವನ್ನು ಕೊಟ್ಟಿದ್ದಾರೆ. ನೀವು ಈ ವರ್ಷ ಕೇವಲ 34 ರಿಂದ 40 ಕೋಟಿ ರೂ. ಗಳನ್ನು ಮಾತ್ರ ಕೊಟ್ಟಿದ್ದೀರಿ.

ಶ್ರೀ ಸಿ.ಟಿ. ರವಿ:– ಹಿಂದೆ ಕೊಟ್ಟಿದ್ದರಲ್ಲಿ ಕಾಲು ಭಾಗ ಕೊಡಿ ಸಾಕು. ಹೋದಾಗಲೆಲ್ಲಾ ಅರ್ಜಿಗಳನ್ನು ಕೊಡುತ್ತಾರೆ.

(ಗೊಂದಲ)

ಅಧ್ಯಕ್ಷರು:– ಏನು ಹೀಗೆ ಎಲ್ಲರೂ ಮಾತನಾಡುತ್ತೀರಿ, What is this? ಇದೇನು ಶಾಸನಸಭೆಯೋ ಏನು? ಶೂನ್ಯ ವೇಳೆಯಲ್ಲಿ ಯಾರು ಪ್ರಸ್ತಾಪ ಮಾಡಿದ್ದಾರೋ ಅವರು ಕೇಳುವುದನ್ನು ಬಿಟ್ಟು ಹೀಗೆ ಎಲ್ಲರೂ ಎದ್ದು ಎದ್ದು

ಮಾತನಾಡುತ್ತೀರಲ್ಲ. ಇದೇನು ವ್ಯವಹಾರವೇ? ಸದನ ನಡೆಸಿಕೊಳ್ಳುವ ರೀತಿಯೇ? ರೀ ಸಚಿವರೆ, ಏನು ಉತ್ತರ ಹೇಳುತ್ತೀರೋ ಹೇಳ್ರಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈಗ ಬಜೆಟ್‌ನಲ್ಲಿ ಎಷ್ಟಿದೆಯೋ ಅಷ್ಟು ಹಣ ಬಿಡುಗಡೆಯಾಗುತ್ತದೆ, ಅದು ಗ್ಯಾರಂಟಿಯಾಗಿ ಆಗುತ್ತದೆ. ಅದರಲ್ಲಿ ನೀವು ಕೇಳಿರತಕ್ಕಂಥ ದೇವಸ್ಥಾನಗಳಿಗೆ ಹಣ ಕೊಡುವಂಥ ಪ್ರಯತ್ನವನ್ನು ಮಾಡುತ್ತೇನೆ.

ಅಧ್ಯಕ್ಷರು:– ಆಯಿತು ಬಿಡಿ. ಮಾಲೀಕಯ್ಯ ಗುತ್ತೇದಾರ್‌ರವರೆ, ನಿಮ್ಮ ವಿಷಯ ಪ್ರಸ್ತಾಪ ಮಾಡಿ.

2. ವಿಷಯ: ಗುಲ್ಬರ್ಗಾ ಜಿಲ್ಲೆಯಲ್ಲಿ ಮಳೆ ಇಲ್ಲದೆ ಅಫಜಲಪುರ ಸೊನ್ನ ಭೀಮಾ ಏತ ನೀರಾವರಿಯ ಡ್ಯಾಂನಲ್ಲಿ ನೀರು ಇಲ್ಲದೆ ಅಫಜಲಪುರ ಕ್ಷೇತ್ರದ ಜನ/ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗಿರುತ್ತದೆ. ಆದಕಾರಣ ಮಹಾರಾಷ್ಟ್ರದ ಉಜ್ಜನಿ ಡ್ಯಾಂನಿಂದ ಅಥವಾ ಆಲಮಟ್ಟಿ ಡ್ಯಾಂನಿಂದ ಭೀಮಾ ಏತ ನೀರಾವರಿಯ ಡ್ಯಾಂಗೆ ನೀರು ಬಿಡುವ ಬಗ್ಗೆ.

– – –

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫಜಲಪುರ):– ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಮಳೆ ಇಲ್ಲದೆ ಅಫಜಲಪುರ ಸೊನ್ನ ಭೀಮಾ ಏತ ನೀರಾವರಿಯ ಡ್ಯಾಂನಲ್ಲಿ ನೀರು ಇಲ್ಲದೇ ಅಫಜಲಪುರ ಕ್ಷೇತ್ರದ ಜನ/ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗಿರುವುದರಿಂದ ಮಹಾರಾಷ್ಟ್ರದ ಉಜ್ಜನಿ ಡ್ಯಾಂನಿಂದ ಅಥವಾ ಆಲಮಟ್ಟಿ ಡ್ಯಾಂನಿಂದ ಭೀಮಾ ಏತ ನೀರಾವರಿ ಡ್ಯಾಂಗೆ ನೀರು ಬಿಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.